**ಅಸಲು ದಾವಾ ನಂಃ 87/2013**
**ಡಿ.ಡಬ್ಲ್ಯೂಃ 01**

**<u>ದಿನಾಂಕಃ 21.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು: ಶ್ರೀ ಎ.ಬಿ., ವಾದಿ ಪರ ವಕೀಲರಿಂದ</u>

ನಮ್ಮ ತಂದೆ ತಾಯಿ ನಾವು ಮೂರು ಜನ ಮಕ್ಕಳು. ನನ್ನ ತಾತನಿಗೆ ಒಂದು ಹೆಣ್ಣು, ಒಂದು ಗಂಡು ಮಗ ಇದ್ದು, ಅದರಲ್ಲಿ ನನ್ನ ತಂದೆ ಮೊದಲನೆಯವರಾಗಿರುತ್ತಾರೆ. ನಮ್ಮ ತಂದೆಯವರ ಕಾಲದಲ್ಲಿ ನನ್ನ ಅಜ್ಜ ಮತ್ತು ಅಜ್ಜಿಗೆ ಸೇರಿರುವ ಚರ ಮತ್ತು ಸ್ಥಿರ ಆಸ್ತಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಆಗಿರುವುದಿಲ್ಲ. ವಾದಿ ನನ್ನ ತಂದೆಯ ತಂಗಿ ಆಗಿರುತ್ತಾರೆ. ವಾದಿಗೆ ಆಸ್ತಿ ಯನ್ನು ನೀಡಿದ ಬಗ್ಗೆ ಪಾಲು ವಿಭಾಗದ ದಾಖಲೆಯನ್ನು ನ್ಯಾಯಾಲಯ ಕ್ಕೆ ಹಾಜರು ಪಡಿಸಲಾಗಿದೆಯೇ ಎಂದರೆ ಸಾಕ್ಷಿಯು ಚಿನ್ನ ಮತ್ತು ಹಣವನ್ನು ನೀಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಸಲ್ಲಿಸಿರುತ್ತೇವೆ ಎಂದು ನುಡಿಯತ್ತಾರೆ. ಸದರಿ ದಾಖಲೆಯನ್ನು ನೊಂದಣಿ ಮಾಡಿಸಲಾಗಿದೆಯೇ ಎಂದರೆ ಸಾಕ್ಷಿಯು ಆ ಕಾಲದಲ್ಲಿ ನೊಂದಣಿ ಮಾಡಿಸಿರುವುದಿಲ್ಲ, ಈಗ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಈಗ ನೊಂದಣಿ ಮಾಡಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನ್ನ ತಂದೆಯವರು ನನ್ನ ಅಜ್ಜಿಯವರ ಹೆಸರಿನಲ್ಲಿದ್ದ ಆಸ್ತಿಯನ್ನು ವಾದಿಗೆ ತಿಳಿಯದಂತೆ ಮೋಸದಿಂದ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ ನನ್ನ ತಂದೆಯವರು ಅಜ್ಜಿಯವರೊಂದಿಗೆ ಒಳ್ಳೆಯ ಸಂಬಂದ ಇಟ್ಟುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ತಂದೆ ಮತ್ತು ಅಜ್ಜಿಗೆ ಸುಮಾರು 10 ವರ್ಷಗಳ ಕಾಲ ವೈಮನಸ್ಸು ಇತ್ತು ಎಂದು ಬೆರಸಿರುತ್ತೇನೆ ಎಂದರೆ ಸಾಕ್ಷಿಯು ವೈಮನಸ್ಸು ಇರಲಿಲ್ಲ ನನ್ನ ಅಜ್ಜಿಗೆ ವಾದಿಯ ಮನೆಗೆ ಹೋಗಿದ್ದರು ಎಂದು ನುಡಿಯುತ್ತಾರೆ. ನಮ್ಮ ಅಜ್ಜಿಯು ನನ್ನ ತಂದೆ ಮನೆಗೆ ಹೋಗದೇ, ವಾದಿಯ ಮನೆಯಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾತ ಇದ್ದ ಕಾಲದಲ್ಲಿಯೇ ನಮ್ಮ ತಂದೆಯವರು ನನ್ನ ಅಜ್ಜಿಗೆ ಸೇರಿದ ಆಸ್ತಿಯನ್ನು ಅವರ ಹೆಸರಿಗೆ ವರ್ಗಾಯಿಸಿಕೊಳ್ಳಲು ಪ್ರಯತ್ನಿಸಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಯವರು ಪಾಲು ವಿಭಾಗ ಮಾಡಿಕೊಂಡ ಸಂದರ್ಬದಲ್ಲಿ ನಮ್ಮ ಅಜ್ಜಿ ಜೀವಂತವಾಗಿದ್ದರು ಎಂದರೆ ಸರಿ.

ನನ್ನ ಅಜ್ಜಿ ನನ್ನ ತಂದೆಯವರ ವಿರುದ್ದ ಚಿತ್ರದುರ್ಗ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವಾ ಸಂಖ್ಯೆ ಓ ಎಸ್ 21/1997 ಎಂದರೆ ನನಗೆ ಗೊತ್ತಿಲ್ಲ.

**ಅಸಲು ದಾವಾ ನಂಃ 87/2013**
**ಡಿ.ಡಬ್ಲ್ಯೂಃ 01**

ಸದರಿ ದಾವೆಯಲ್ಲಿ ನನ್ನ ಅಣ್ಣನನ್ನು ಪಕ್ಷಗಾರರನ್ನಾಗಿ ಸೇರಿಸಲಾಗಿತ್ತು ಎಂದರೆ ಸರಿಯಲ್ಲ. ನನ್ನ ಅಜ್ಜಿ 2008 ರಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿ. ಕೆಲವು ವರ್ಷಗಳ ಕಾಲ ಸದರಿ ದಾವೆಗೆ ಸಂಬಂಧಿಸಿದಂತೆ ಚಳ್ಳಕೆರೆ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿತ್ತು ಎಂದರೆ ಸರಿಯಲ್ಲ. ನನ್ನ ಅಜ್ಜಿ ತಾತ ನನ್ನ ತಂದೆಗೆ ಕಾನೂನು ಬದ್ದವಾಗಿ ಮಾಡಿಕೊಟ್ಟ ಪಾಲು ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಪಾಲು ವಿಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ ವಾದಿಯ ವಿವಾಹದ ಸಂದರ್ಬದಲ್ಲಿ ನೀಡಿದ ವಡವೆ ಮತ್ತು ಹಣಕ್ಕೆ ಸಾಕ್ಷಿಯಾಗಿ ಮಾಡಿಕೊಂಡ ಒಪ್ಪಂದ ಪತ್ರವನ್ನು ಪಾಲು ವಿಭಾಗ ಪತ್ರವೆಂದು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಯವರು ನನ್ನ ಅಜ್ಜಿಗೆ ಪಾಲು ವಿಭಾಗ ಕೊಡದೇ ಅವರು ಜೀವಂತ ಇರುವಾಗಲೇ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**( ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

C/c ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.